OS No. 95/2018 DW-1

<u>ದಿನಾಂಕ **03.02.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಯೂ ವಕೀಲರಿಂದಃ</u>

ದಾವಾ ಆಸ್ತಿ ಸರ್ವೆ ನಂಬರ್ ಈ 415/3 ಎಂದು ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕರಾರು ಆದ ನಂತರ 11 ಎ ನಕ್ಷೆ ಗೆ ನಾನು ವಾದಿಗೆ ಸಹಿ ಮಾಡಿಕೊಟ್ಟಿರುತ್ತೇನೆಂದರೆ ಹೌದು ಎಂದು ನಂತರ ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ದಾವಾ ಆಸ್ತಿ ಸರ್ವೆ ನಂಬರ್ ಈ 415/3 ಎಂದು ಬದಲಾಗಿದೆ ಎಂದರೆ ಸುಳ್ಳು. ನಿಪಿ-7 ರಲ್ಲಿ ದಾವಾ ಆಸ್ತಿ ಸರ್ವೆ ನಂಬರ್ ಈ 415/3 ಎಂದು ಇದೆ ಎಂದರೆ ನಿಜ. ಪುಟ್ಟಈರೇಗೌಡ ನನ್ನ ಬಳಿ 5 ಲಕ್ಷ ಸಾಲ ಕೇಳಿದ್ದಾನೆಂದರೆ ಸುಳ್ಳು. ಪುಟ್ಟಈರೇಗೌಡ ನನ್ನ ಬಳಿ ಸಾಲ ಕೇಳಿದ್ದರೆ ಅವರೇ ಕರಾರು ಬರೆಯಿಸಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ನಾನು ಪ್ರತಿವಾದ ಪತ್ರದಲ್ಲಿ10 ಸಾವಿರ ನಗದು ಮತ್ತು 2,90,000/- ಕ್ಕೆ ಚೆಕ್ಕನ್ನು ಪುಟ್ಟಈರೇಗೌಡ ರವರಿಗೆ ನೀಡಿದ್ದೇನೆಂದು ತಿಳಿಸಿರುತ್ತೇನೆಂದರೆ ಸುಳ್ಳು. ನನ್ನ ಮಕ್ಕಳು ಕ್ರಯ ಮಾಡಿಕೊಡಲು ಒಪ್ಪಲಿಲ್ಲ ಎಂದರೆ ನಿಜ. ಇದನ್ನು ಪ್ರತ್ಯುತ್ತರದಲ್ಲಿ ತಿಳಿಸಿರುತ್ತೇನೆಂದರೆ ನಿಜ. ವಾದಿಗೆ ಮತ್ತು ಅವರ ಮಾವನಿಗೆ ಊರಿನಲ್ಲಿ ಹಣ ವಾಪಸ್ಸು ಪಡೆದುಕೊಳ್ಳಲು ತಿಳಿಸಿರುತ್ತೇನೆ. ಈ ಬಗ್ಗೆ ನಾನು ದೂರು ನೀಡಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಬ್ಯಾಂಕ್ ಪಾಸ್ ಬುಕ್ ಗೆ ದಾಖಲಾದಾಗ 2,90,000/- ಬಂದ ಬಗ್ಗೆ ಗೊತ್ತಾಗಿರುತ್ತದೆ. ವಾದಿಗೆ ಆರ್ ಟಿ ಜಿ ಎಸ್ ಅಥವಾ ಚೆಕ್ ಮೂಲಕ ವಾಪಸ್ಸು ಕೊಡಲು ನನಗೆ ಗೊತ್ತಾಗಲಿಲ್ಲ. ವಾದಿಯವರು ಬಲವಂತವಾಗಿ ನನ್ನ ಬಳಿ ಸಹಿ ಪಡೆದಿಲ್ಲ ಎಂದರೆ ಸುಳ್ಳು. ಬಲವಂತವಾಗಿ ನನ್ನ ಬಳಿ ಸಹಿ ಪಡೆದಿದ್ದರೆ ನಾನು ದೂರು ನೀಡುತ್ತಿದ್ದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಬಲವಂತವಾಗಿ ನನ್ನ ಬಳಿ ಸಹಿ ಪಡೆದಿಲ್ಲ ಎಂದರೆ ಸುಳ್ಳು. ಆಸ್ತಿ ಬೇರೆಯವರಿಗೆ ಮಾರಾಟ ಮಾಡಿದರೆ ಹೆಚ್ಚು ಹಣ ಬರುತ್ತದೆ ಎಂದು ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ವಾದಿಯವರು ನನ್ನ ಕಛೇರಿಗೆ ಬಂದು

ಬಲವಂತವಾಗಿ 10 ನಗದು ಇಟ್ಟುಹೋಗಿಲ್ಲ ಎಂದರೆ ಸುಳ್ಳು. ಹಣ ಇಟ್ಟುಹೋಗದೇ ಇರುವುದರಿಂದ ನಾನು ದೂರು ನೀಡಿಲ್ಲ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**